

ಗುಂಡ: ನೀನ್ಯಾಕೆ ಹುಡುಗಿಯರತ್ತ ಹೆಚ್ಚು ಆಕರ್ಷಿತನಾಗುತ್ತೀಯಾ?
ತಿಮ್ಮ: ನನ್ನಲ್ಲಿ ಆಯಸ್ಕಾಂತ ಶಕ್ತಿ ಇದೆ.
ಗುಂಡ: ಮತ್ತ್ಯಾಕೆ ಅವರು ನಿನ್ನತ್ತ ಆಕರ್ಷಿತರಾಗ್ತಿಲ್ಲ.
ತಿಮ್ಮ: ಬಹುಶಃ ಅವರಲ್ಲಿ ಕಬ್ಬಿಣ ಅಂಶ ಕಡಿಮೆ ಇರ್ಬೇಕು.

★★★

ಗುಂಡ ಟೀಚರ್‌ಗೆ ರಾತ್ರಿ ಒಂದು ಗಂಟೆಗೆ ಫೋನ್ ಮಾಡಿದ.
ಗುಂಡ: ಟೀಚರ್ ಒಂದು ಗಂಟೆಗೆ ಫೋನ್ ಮಾಡ್ತಿದೀನಿ ಅಂತ ಬೇಜಾರು ಮಾಡ್ಕೋಬೇಡಿ. ಬೆಳಗ್ಗೆ ಪಾಠ ಮಾಡಿದ್ರಲಾ. ಅದನ್ನ ಇನ್ನೊಂದು ಸಲ ರಿಪೀಟ್ ಮಾಡ್ತೀರಾ?
ಟೀಚರ್: ಯಾಕೋ ಸಬ್ಜೆಕ್ಟ್ ಅಷ್ಟೊಂದು ಇಂಟರ್‌ಸ್ಟಿಂಗ್ ಆಗಿತ್ತಾ?
ಗುಂಡ: ಬೆಳಿಗ್ಗೆ ಪಾಠ ಕೇಳ್ತಾ ನಿದ್ದೆ ಮಾಡಿದ್ದೆ. ಈಗ ನಿದ್ದೆ ಬರ್ತಿಲ್ಲ.

(ಸಂಗ್ರಹ) **ಜಗದೀಶ ಎಂ. ಸಂಗಣ್ಣವರ, ಬೆಳಗಾವಿ**

ಗೆಳೆಯ: ನಿನ್ನೆ ನಿನ್ನ ಮಗ 50 ಪೈಸೆ ನುಂಗಿದ್ದಕ್ಕೆ ಡಾಕ್ಟರ ಹತ್ತಿರ ಕರೆದುಕೊಂಡು ಹೋಗಿದ್ದೆಯಲ್ಲ ಏನಾಯಿತು?
ಗುಂಡ: ಅದನ್ನು ತೆಗೆದು ಅವರು ಸಾವಿರ ರೂಪಾಯಿ ನುಂಗಿದರು.

★★★

ಟೀಚರ್: ನಿನ್ನೆ ಯಾಕೋ ಶಾಲೆಗೆ ಬರಲಿಲ್ಲ?
ಗುಂಡ: ನಾಟಕಕ್ಕೆ ಹೋಗಿದ್ದೆ
ಟೀಚರ್: ಭಾನುವಾರ ಹೋಗಬಹುದಿತ್ತಲ್ಲ.
ಗುಂಡ: ಕರಪತ್ರದಲ್ಲಿ 'ಈ ದಿನವೇ ನೋಡಿ' ಅಂತ ಇತ್ತು ಟೀಚರ್.

★★★

ಗುಂಡ: ಅಪ್ಪಾ ನಮ್ಮ ಟೀಚರ್‌ಗೆ ಕೂಡೋ ಲೆಕ್ಕವೇ ಗೊತ್ತಿಲ್ಲ
ತಂದೆ: ಯಾಕೋ ಏನಾಯ್ತು?
ಗುಂಡ: ಮತ್ತಿನ್ನೇನಪ್ಪ! 4+4 ಎಷ್ಟೂಂತ ನನ್ನನ್ನೇ ಕೇಳ್ತಾರೆ.

★★★

ಗೆಳೆಯ: ಮೊಬೈಲಿನಲ್ಲಿ ಯಾರ ಜತೆ ಅಷ್ಟು ಸಣ್ಣದಾಗಿ ಮಾತಾಡುತ್ತಿದ್ದೆ?
ಗುಂಡ: ತಂಗಿಯ ಜೊತೆಯಲ್ಲಿ.
ಗೆಳೆಯ: ಅದಕ್ಕೇಕೆ ಅಷ್ಟು ಸಣ್ಣ ಧ್ವನಿ?
ಗುಂಡ: ನಾನು ಮಾತನಾಡುತ್ತಿದ್ದುದು ನಿನ್ನ ತಂಗಿಯ ಜೊತೆ.

(ಸಂಗ್ರಹ) **ಎಂ.ಕೆ. ಮಂಜುನಾಥ್, ಬೆಂಗಳೂರು**



